# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **599**

ಸದಸ್ಯರ ಹೆಸರು : ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 09-03-2026

ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಐದು ವಿದ್ಯುತ್ ಸರಬರಾಜು ಕಂಪನಿಗಳು ತೀವ್ರ ಆರ್ಥಿಕ ಸಂಕಷ್ಟದ ಸುಳಿಗೆ ಸಿಲುಕಿರುವುದು ನಿಜವೇ ಸರ್ಕಾರದಿಂದ ಪಾವತಿಯಲ್ಲಿ ಕೊರತೆಯಾಗುವ ಮೊತ್ತ ಸರಿದೂಗಿಸಿಕೊಳ್ಳಲು ಐದು ಕಂಪನಿಗಳು ಸಾಲದ ಮೊರೆ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, | ಐದು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸರ್ಕಾರದ ವತಿಯಿಂದ ಸಹಾಯಧನ ಕಾಲಕಾಲಕ್ಕೆ ಹಾಗೂ ನಿಯಮಿತವಾಗಿ ಬಿಡುಗಡೆಯಾಗುತ್ತಿದೆ. ಹೆಚ್ಚುವರಿ ವಿದ್ಯುತ್ ಖರೀದಿ ಮತ್ತು ಬಂಡವಾಳ ಕಾಮಗಾರಿಗಳ ನಿರ್ವಹಣೆಗಾಗಿ ವಿದ್ಯುತ್ ಸರಬರಾಜು ಕಂಪನಿಗಳು ವಿವಿಧ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲಾಗುತ್ತಿದೆ. |
| ಆ) | ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಒದಗಿಸಿರುವ ಮಾಹಿತಿಯಂತೆ ಎಸ್ಕಾಂಗಳ ಒಟ್ಟು ಸಾಲದ ಮೊತ್ತ 45 ಸಾವಿರ ಕೋಟಿ ರೂ. ದಾಟಿದೆ: | • ವಿದ್ಯುತ್ ಸರಬರಾಜು ಕಂಪನಿಗಳ ಜನವರಿ-2026 ರ ಅಂತ್ಯದವರೆಗಿನ ಒಟ್ಟು ಧೀರ್ಘಾವಧಿ ಸಾಲದ ಮೊತ್ತ ರೂ.42,750 ಕೋಟಿಗಳಾಗಿರುತ್ತದೆ.<br>• ವಿದ್ಯುತ್ ವಿತರಣಾ ಕಂಪನಿಗಳು ವಿದ್ಯುತ್ ಪೂರೈಕೆ ವಿಶ್ವಾಸಾರ್ಹತೆಯಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ, ನಿಯಂತ್ರಕ ಚೌಕಟ್ಟಿನ ಅಂತರ್ಗತದಲ್ಲಿ ಕಾರ್ಯನಿರ್ವಹಿಸುತ್ತವೆ., ಇದರ ಪರಿಣಾಮವಾಗಿ, ಚಾಲ್ತಿ ಬಂಡವಾಳದ ಅಗತ್ಯತೆಗಳನ್ನು ಪೂರೈಸಲು ಹಾಗೂ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಗೆ ಅನುಗುಣವಾಗಿ ಮೂಲಸೌಕರ್ಯ ಅಭಿವೃದ್ಧಿಗೆ ಅಗತ್ಯವಾದ ಬಂಡವಾಳ ವೆಚ್ಚಕ್ಕಾಗಿ ಸಾಲ ಸಂಪನ್ಮೂಲಗಳ ಮೇಲೆ ಅವಲಂಬನೆ ಅನಿವಾರ್ಯವಾಗುತ್ತದೆ. ಈ ಆರ್ಥಿಕ ವ್ಯವಸ್ಥೆಯಿಂದ ನಿರಂತರ ಮತ್ತು ವಿಶ್ವಾಸಾರ್ಹ ವಿದ್ಯುತ್ ಪೂರೈಕೆ ಸಾಧ್ಯವಾಗಿಸುತ್ತದೆ. |
| | ಈ ಪೈಕಿ ಬೆಸ್ಕಾಂ ಅತ್ಯಧಿಕ 19.029 ಕೋಟಿ ರೂ. | • ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಫೆಬ್ರುವರಿ 2026ರ ಅಂತ್ಯಕ್ಕೆ ದೀರ್ಘಾವಧಿ ಸಾಲವು ರೂ.17,556 ಕೋಟಿ ಇರುತ್ತದೆ. |
| | ಕೆಪಿಸಿಎಲ್ ಗೆ ಬರಬೇಕಾದ ಬಾಕಿ ಮೊತ್ತ 19 ಸಾವಿರ ಕೋಟಿ ರೂ. ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | • ದಿನಾಂಕ:02.03.2026ಕ್ಕೆ ಕೆಪಿಸಿಎಲ್‌ಗೆ ಎಸ್ಕಾಂಗಳು ಪಾವತಿಸಬೇಕಾದ ಬಾಕಿ ಮೊತ್ತವು (ಲೇಟ್ ಪೇಮೆಂಟ್ ಸರ್ಚಾರ್ಜ್ (LPS) ರೂ. 5,277 ಕೋಟಿ ಸೇರಿದಂತೆ) ರೂ.8,755 ಕೋಟಿಗಳಾಗಿರುತ್ತದೆ. ಎಸ್ಕಾಂಗಳಿಂದ ಪಾವತಿಸಬೇಕಾದ ನಿವ್ವಳ ಬಾಕಿ (LPS ಹೊರತುಪಡಿಸಿ) ಮೊತ್ತವು ರೂ.3,478 ಕೋಟಿಗಳಾಗಿರುತ್ತದೆ. |
| | ಹಾಗಿದ್ದಲ್ಲಿ. ಇದಕ್ಕೆ ಯಾರು ಹೊಣೆ? ಯಾವ ಕಾರಣಗಳಿಂದ ಈ ಪರಿಸ್ಥಿತಿ ಎದುರಾಗಿದೆ: | • 2005-06 ರಿಂದ 2019-20 ರವರೆಗೆ ಮೆ. ರಾಮ್‌ರಾಜ್ ಅಂಡ್ ಕಂಪನಿ, ಚಾರ್ಟೆಡ್ ಅಕೌಂಟೆಂಟ್ಸ್, ಇವರ ವತಿಯಿಂದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ಖರೀದಿ ಮೊತ್ತವನ್ನು ಸಮನ್ವಯಗೊಳಿಸಿರುವ ನಿವ್ವಳ ಬಾಕಿ ಮೊತ್ತ (LPS ಮೊತ್ತ ಹೊರತುಪಡಿಸಿ) ರೂ.3,478 ಕೋಟಿಗಳಾಗಿರುತ್ತದೆ |

<table>
<tr><td></td><td></td><td>

• ವಿದ್ಯುತ್ ಖರೀದಿ ಮೊತ್ತವು ಅನಿಯಂತ್ರಿತ ವೆಚ್ಚವಾಗಿದ್ದು, ಪ್ರತಿ ವರ್ಷ ವಿದ್ಯುತ್ ಬೇಡಿಕೆ ಹೆಚ್ಚಾಗುತ್ತಿರುವಂತೆ ವಿದ್ಯುತ್ ಖರೀದಿ ಮೊತ್ತವು ಹೆಚ್ಚಾಗುತ್ತದೆ.

</td></tr>
<tr><td>ಇ)</td><td>ಸರ್ಕಾರದ ನಗರಾಭಿವೃದ್ಧಿ ಇಲಾಖೆ. ಸ್ಥಳೀಯ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳಿಂದ ಇದುವರೆಗೂ ಎಷ್ಟು ವಿದ್ಯುತ್ ಬಾಕಿ ಉಳಿಸಿಕೊಂಡಿದೆ: ಇದರ ವಸೂಲಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು</td><td>

ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿನ ನಗರ ಅಭಿವೃದ್ಧಿ ಇಲಾಖೆ, ಸ್ಥಳೀಯ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳಿಂದ ಬರಬೇಕಾದ ವಿದ್ಯುತ್ ಶುಲ್ಕ ಬಾಕಿ ಮೊತ್ತದ ವಿವರ ಈ ಕೆಳಗಿನಂತಿದೆ.

<table>
<tr><td rowspan="3">ಇಲಾಖೆಯ ಹೆಸರು</td><td colspan="6">ದಿನಾಂಕ 31.01.2026ರ ಅಂತ್ಯಕ್ಕೆ ಉಳಿದಿರುವ ಬಾಕಿ ಮೊತ್ತ</td></tr>
<tr><td colspan="6">(ರೂ. ಕೋಟಿಗಳಲ್ಲಿ)</td></tr>
<tr><td>ಬೆಸ್ಕಾಂ</td><td>ಸೆಸ್ಕ್</td><td>ಮೆಸ್ಕಾಂ</td><td>ಹೆಸ್ಕಾಂ</td><td>ಜೆಸ್ಕಾಂ</td><td>ಒಟ್ಟು</td></tr>
<tr><td>ನಗರಾಭಿವೃದ್ಧಿ ಇಲಾಖೆಯ (ಕು.ನಿ & ಬೀ.ದೀ ಸ್ಥಾವರಗಳು)</td><td>3404.7</td><td>64.43</td><td>23.22</td><td>194.45</td><td>236.68</td><td>3923.48</td></tr>
<tr><td>ಗ್ರಾಮೀಣಾಭಿವೃದ್ಧಿ ಇಲಾಖೆ (ಕು.ನಿ & ಬೀ.ದೀ ಸ್ಥಾವರಗಳು)</td><td>2364.43</td><td>563.32</td><td>237.92</td><td>797.22</td><td>1663.59</td><td>5626.48</td></tr>
<tr><td>ಇತರೆ ಸರ್ಕಾರಿ ಇಲಾಖೆಗಳು</td><td>442.01</td><td>605.8</td><td>506.74</td><td>1057.95</td><td>301.44</td><td>2913.94</td></tr>
<tr><td>**ಒಟ್ಟು**</td><td>**6211.14**</td><td>**1233.55**</td><td>**767.88**</td><td>**2049.62**</td><td>**2201.73**</td><td>**12463.92**</td></tr>
</table>

ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ನಗರಾಭಿವೃದ್ಧಿ ಇಲಾಖೆ, ಸ್ಥಳೀಯ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳಿಂದ ಬರಬೇಕಾದ ವಿದ್ಯುತ್ ಶುಲ್ಕ ಬಾಕಿಗೆ ಸಂಬಂದಿಸಿದಂತೆ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

- ಇಂಧನ ಇಲಾಖೆಯಿಂದ ತ್ರೈಮಾಸಿಕವಾಗಿ ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರೊಂದಿಗೆ ನಿಯಮಿತವಾಗಿ ಪತ್ರ / ಅರೆ ಸರ್ಕಾರಿ ಪತ್ರ ಮುಖಾಂತರ ವಿದ್ಯುತ್ ಬಾಕಿ ಮೊತ್ತವನ್ನು ಪಾವತಿಸಲು ಕೋರಲಾಗಿರುತ್ತದೆ.
- ವಿದ್ಯುತ್ ಸರಬರಾಜು ಕಂಪನಿಗಳು ಸರ್ಕಾರಿ ಇಲಾಖೆಯ ಸ್ಥಳೀಯ ಕಛೇರಿಗೆ ಭೇಟಿ ನೀಡಿ ವಿದ್ಯುತ್ ಬಾಕಿ ಶುಲ್ಕವನ್ನು ಪಾವತಿಸುವಂತ ವಿಭಾಗೀಯ ಮತ್ತು ಉಪ ವಿಭಾಗೀಯ ಕಛೇರಿಗಳ ಅಧಿಕಾರಿಗಳ ಮೂಲಕ ಕೋರಲಾಗುತ್ತಿದೆ.
- ವಿದ್ಯುತ್ ಸರಬರಾಜು ಕಂಪನಿಗಳು ಕಛೇರಿಯಲ್ಲಿ ಪ್ರತಿ ವಾರವು ಜರುಗುವ ಕಂದಾಯ ಪರಿಶೀಲನಾ ಸಭೆಗಳಲ್ಲಿ ಸರ್ಕಾರಿ ಸ್ಥಾವರಗಳ ವಿದ್ಯುತ್ ಬಾಕಿ ಇಲಾಖಾವಾರು ಪರಿಶೀಲಿಸಿ ಎಲ್ಲಾ ವಲಯ/ ವೃತ್ತ/ ವಿಭಾಗಾಧಿಕಾರಿಗಳಿಗೆ ವಸೂಲಾತಿಯನ್ನು ತೀವ್ರಗೊಳಿಸಲು ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿರುತ್ತದೆ.

</td></tr>
<tr><td>ಈ)</td><td>ರಾಜ್ಯದ 5 ವಿದ್ಯುತ್ ವಿತರಣೆ ಕಂಪನಿಗಳು ಸಾಲ ಮತ್ತು ನಷ್ಟ ಅನುಭವಿಸುತ್ತಿದ್ದು, ಸರ್ಕಾರವು ಸಕಾಲಕ್ಕೆ ಸಹಾಯಧನ ಪಾವತಿಸದೇ ಇರಲು ಕಾರಣಗಳೇನು?</td><td>ಸರ್ಕಾರದಿಂದ ಸಹಾಯಧನವನ್ನು ಕಾಲಕಾಲಕ್ಕೆ ಹಾಗೂ ನಿಯಮಿತವಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.</td></tr>
</table>

ಸಂಖ್ಯೆ: ಎನರ್ಜಿ 40 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು